# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಚರಿತ್ರೆ ವಿಭಾಗ**

**ಪಾಕ್ಷಿಕ ಮಾತು –40**

## ಕೃಷ್ಣ ಮೇಲ್ದಂಡೆ ಯೋಜನೆಯ ಸಾಧಕ–ಬಾಧಕಗಳು–07.01.2025




ಕನ್ನಡ ವಿಶ್ವವಿದ್ಯಾಲಯ, ಹಂಪಿ. ಚರಿತ್ರೆ ವಿಭಾಗದ ವತಿಯಿಂದ ದಿನಾಂಕ 07.01.2025 ರಂದು ಪಾಕ್ಷಿಕ ಮಾತು–40 ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಶೋಧನಾ ವಿದ್ಯಾರ್ಥಿಯಾದ **ಪವಾಡಪ್ಪ ಮನುಗುಳಿ** ಅವರು ಕೃಷ್ಣ ಮೇಲ್ದಂಡೆ ಯೋಜನೆ ಉಗಮ, ಬೆಳವಣಿಗೆಯ ಹಾದಿಯನ್ನು ತಿಳಿಸುವುದರ ಜೊತೆಗೆ ಬಾಗಲಕೋಟೆ ಜಿಲ್ಲೆಯ ಚಾರಿತ್ರಿಕ ಅಂಶಗಳನ್ನು ನಿರೂಪಿಸುವುದರ ಮೂಲಕ ಕೃಷ್ಣ ಮೇಲ್ದಂಡೆ ಯೋಜನೆಯು 1889ರಲ್ಲಿ ಆರಂಭಗೊಂಡಿತು. ಈ ಯೋಜನೆಯು ಹೈದರಾಬಾದ್ ಸಂಸ್ಥಾನದ ಅಧೀನದಲ್ಲಿನ ರಾಯಚೂರು ಹಾಗೂ ಕಲ್ಬುರ್ಗಿ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕೆಂದು ನೀಲನಕ್ಷೆಯನ್ನು ಸಹ ರೂಪಿಸಲಾಗಿತ್ತು. ಆದರೆ 1956 ರಾಜ್ಯ ಪುನರ್ ವಿಂಗಡಣೆಯಿಂದಾಗಿ ಮೈಸೂರು ರಾಜ್ಯಕ್ಕೆ ಈ ಎರಡು ಜಿಲ್ಲೆಗಳು ಸೇರ್ಪಡೆಗೊಂಡವು ನಂತರ ಮೈಸೂರು ರಾಜ್ಯ ಸರ್ಕಾರ ಕೃಷ್ಣ ಮೇಲ್ದಂಡೆ ಯೋಜನೆಗೆ ಅನುಷ್ಠಾನಕ್ಕೆ ತನಿಖೆಯನ್ನು ಆರಂಭಿಸಿತು. ಪರಿಣಾಮವಾಗಿ ಸಾವಿರ 1956 ಮೇ 22 ರಂದು ಅಂದಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಈ ಯೋಜನೆಗೆ ಅಡಿಪಾಯ ಹಾಕಿದರು. ಈ ಯೋಜನೆಯಿಂದ ಬಾಗಲಕೋಟೆ ಜಿಲ್ಲೆಯ 201 ಗ್ರಾಮಗಳು ಮುಳುಗಡೆಯಾಗಿರುವ ಸಾಧಕ ಬಾಧಕಗಳನ್ನು ತಿಳಿಸುವುದರ ಜೊತೆಗೆ ಅದರ ಪುನರ್ವಸತಿ ಸೌಲಭ್ಯಗಳ ಕುರಿತು ಸವಿಸ್ತಾರವಾಗಿ ಮಾಹಿತಿ ವಿವರಿಸಿದರು.

ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕೃಷ್ಣ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಜನರಿಗೆ ಸರ್ಕಾರವು ಪುನರ್ವಸತಿ ಸೌಕರ್ಯಗಳನ್ನು ನೀಡಿದ ಕುರಿತು ವಿವರಿಸಿದರು.

ಈ ಕಾರ್ಯಕ್ರಮದಲ್ಲಿ ಹಿರಿಯ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಪ್ರೊ. ಕೆ. ಮೋಹನ್‌ಕೃಷ್ಣ ರೈ ಅವರು ಹಾಗೂ ಹಿರಿಯ ಪ್ರಾಧ್ಯಾಪಕರು ಪ್ರೊ. ಎನ್.ಚಿನ್ನಸ್ವಾಮಿ ಸೋಸಲೆ ಅವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಸಂಚಾಲಕರು ಪ್ರದೀಪ್ ಹೆಚ್ ಹಾಗೂ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಪಾಕ್ಷಿಕ ಮಾತು – ೪೦**

**ಅಧ್ಯಕ್ಷತೆ**
**ಡಾ.ವಿರೂಪಾಕ್ಷಿ ಪೂಜಾರಹಳ್ಳಿ**
ಹಿರಿಯ ಪ್ರಾಧ್ಯಾಪಕರು, ಚರಿತ್ರೆ ವಿಭಾಗ

**ವಿಷಯ**
**ಕೃಷ್ಣಾ ಮೇಲ್ದಂಡೆ ಯೋಜನೆಯ ಸಾಧಕ–ಬಾಧಕಗಳು**

**ವಿಷಯ ಮಂಡನೆ**
**ಪವಾಡಪ್ಪ ಮನುಗುಳಿ**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ

ದಿನಾಂಕ: ೦೭.೧೧.೨೦೨೫
ಸಮಯ: ಬೆಳಗ್ಗೆ ೧೧:೦೦ ಗಂಟೆ
ಸ್ಥಳ: ನಳಂದ ಸಭಾಂಗಣ, ಚರಿತ್ರೆ ವಿಭಾಗ

**ಎಲ್ಲರಿಗೂ ಸ್ವಾಗತ**

| | | |
|---|---|---|
| **ಡಾ.ಕೆ.ಮೋಹನ್‌ಕೃಷ್ಣ ರೈ** | **ಪ್ರದೀಪ ಹೆಚ್.** | **ಡಾ.ವಿಜಯ್ ಪೂಣಚ್ಚ ತಂಬಂಡ** |
| ಮುಖ್ಯಸ್ಥರು | ಸಂಚಾಲಕರು | ಕುಲಸಚಿವರು |
| ಚರಿತ್ರೆ ವಿಭಾಗ | ಪಿಎಚ್‌ಡಿ ವಿದ್ಯಾರ್ಥಿ | ಕನ್ನಡ ವಿಶ್ವವಿದ್ಯಾಲಯ, ಹಂಪಿ |

**ಇವರಿಗೆ,**

ಮಾನ್ಯ ಕುಲಪತಿಗಳ ಆಪ್ತಶಾಖೆ, ಕ.ವಿ.ಹಂ.
ಮಾನ್ಯ ಕುಲಸಚಿವರ ಆಪ್ತಶಾಖೆ, ಕ.ವಿ.ಹಂ.
ಮಾನ್ಯ ನಿರ್ದೇಶಕರು, ಅಧ್ಯಯನಾಂಗ, ಕ.ವಿ.ಹಂ.
ಮಾನ್ಯ ನಿರ್ದೇಶಕರು, ಶೈಕ್ಷಣಿಕ, ಕವಿಹಂ